2. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ

ವಿಷಯ : ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿ ಅವರ ಸಾವಿನ ಬಗ್ಗೆ

ಶ್ರೀ ಅಶೋಕ್ ಎಂ. ಪಟ್ಟಣಶೆಟ್ಟಿ (ಸರ್ಕಾರಿ ಮುಖ್ಯ ಸಚೇತಕರು): ಮಾನ್ಯ ಅಧ್ಯಕ್ಷರೆ, ದಯವಿಟ್ಟು ಸದನವನ್ನು ನಡೆಸಬೇಕು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಇಂದು ಈ ಪ್ರಕರಣವನ್ನು ಮುಚ್ಚಿ ಹಾಕುವ ಹುನ್ನಾರ ರಾಜ್ಯ ಸರ್ಕಾರದಲ್ಲಿ ನಡೆಯುತ್ತಿದೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್: ಸಿ.ಐ.ಡಿ. ಹಿರಿಯ ಅಧಿಕಾರಿಯಾಗಿದ್ದಂತಹ ಮೊಹಂತಿಯವರನ್ನು ಏಕೆ transfer ಮಾಡಿದ್ದಾರೆಂದು ಸರ್ಕಾರ ಹೇಳಬೇಕಾಗುತ್ತದೆ. ಇವತ್ತು ಈ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ, ಕುತಂತ್ರ ಈ ಸರ್ಕಾರದಲ್ಲಿ ನಡೆದಿದೆ. ನಾವು ಇಂದೂ ಕೂಡಾ ಒತ್ತಾಯ ಮಾಡುತ್ತೇವೆ. ಸರ್ಕಾರದವರು ಇದರಲ್ಲಿ ಮೊಂಡುತನವನ್ನು ಮಾಡುತ್ತಿದ್ದಾರೆ. Everyone wants CBI enquiry.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ವಿಜ್ಞಾಪನೆ ಮಾಡುತ್ತೇವೆ. ಈ ಪ್ರಕರಣವನ್ನು ಮುಚ್ಚಿ ಹಾಕುವ ಯಾವುದೇ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿಲ್ಲ. ನಾವು ಪಾರದರ್ಶಕವಾಗಿ ವಿಚಾರಣೆ ಮಾಡುತ್ತಿದ್ದೇವೆ. ಸದನ ರಾಜ್ಯದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸರ್ಕಾರ ಮೊಂಡುತನ

ಮಾಡುತ್ತಿದೆ. ಈ ಪ್ರಕರಣವನ್ನು ಸಿ.ಬಿ.ಐ.ಗೆ ಕೊಡಲೇಬೇಕು.

(ಗೊಂದಲ)

ಅಧ್ಯಕ್ಷರು: ಪ್ರಶ್ನೋತ್ತರಗಳನ್ನು ಸದನದ ಮುಂದೆ ಮಂಡಿಸುವುದು

3. ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನಾ ರಚನೆ, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ : 19.03.2015 ರ ಹದಿಮೂರನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳ ಉತ್ತರಗಳನ್ನು ಮತ್ತು ದಿನಾಂಕ 16.03.2015ರ 10ನೇ ಪಟ್ಟಿಯಿಂದ ವರ್ಗಾವಣೆಗೊಂಡ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 04 (2570) ಗೆ (ಶ್ರೀ ಈಶ್ವರ ಭೀಮಣ್ಣ ಖಂಡ್ರೆ) ಮತ್ತು ದಿನಾಂಕ 19.03.2015 ಲಿಖಿತ ಮೂಲಕ ಉತ್ತರಿಸುವ ಚುಕ್ಕೆ ಗುರುತಿಲ್ಲದ 224 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ. (ಅನುಬಂಧ–1)

(ಗೊಂದಲ)

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು